ಷರತ್ತುಗಳು.

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುರ್ತುಮಾಡಿರುವ ಮತ್ತು ಸೊಗಗಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ, ಕಂಟ್ರಾಕ್ಟದಾರನು ಡಿ|| ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಬೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಕೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಕಾಣಿಕೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಕೇರಿ ಇಲ್ಲ ಉಳಿಕೆಕೊಂಡಿರುವ ಸಂದಲ್ ಅಳಲೆ ಹುಣಸೆ ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ನಾ ನೆಯಾಗಿ ಕಡೆದರೆ ಅಂಥಾದ್ದೆಲ್ಲಾ ಇಲಾಖಾ ಮೂಲಕ ಕಾಲ್ಸ್ ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಕೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸೌದೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟುದಾರನು ಪಾವತಿ ಮಾಡಿರುವ ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಕತರಾವಣಿ ವ ಸಾಗಿಸತಕ್ಕ ಹಕ್ಕು ದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟುದಾರ ಖರೀದಿಮಾಡುವ ಸೌದೆ ಮೊತ್ತಕ್ಕೆ ತೀರ್ದಾದು ಆದ ದರ ಗಾಡಿ ಜೋಜಾ ಬಂದಕ್ಕೆ 34 ಸಲೆ ಅಡಿ ಅಥವಾ ಟರ್ ಬಂದಕ್ಕೆ 68 ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ಮೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನಾಕರನು ರಹದಾರಿ ಕೊಡುತ್ತಾನೆ.

6. ಕೂಪು ಯಾ ಕಂಪರ್ಟಮೆಂಟಿನಿಂದ ಸೌದೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟ ಇರುವ ಕೂಪಿನಲ್ಲಿ ಆಗಲಿ ಅಥವಾ ಸೌದೆ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫಿಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರು ಅಜಾಗ್ರತೆಯಿಂದ ಉಂಟಾದ್ದೆಂದು ಡಿ|| ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟುದಾರನ ಕಡೆ ಗಾಡಿಯವರು ರೈಲ್ವೆ ಸ್ಟೇಷನ್‌ಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಿಡಿ ಸೌದೆಯನ್ನು ಕಡಿದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇಷನ್ ಪ್ರಕಾರ ಪ್ರಾಸಿಕ್ಯೂಷನ್‌ಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 29ನೇ ಜನವರಿ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ರೇಂಜ್ ಫಾರೆಸ್ಟ್ ಆಫಿಸರವರ ಲೆಕ್ಕದಲ್ಲಿ ಈ ರೇಂಜ್ ಬಾಬತು ವಾರ್ಜಿನ್ನಿನಲ್ಲಿ ಕಂಡ ಹೆಸರಿನ ನಾಕರರ ತಲಬು ರೂ. 3—11—11 ಪಾವತೀ ಇಲ್ಲದೇ ಬಾಕೀಯಲ್ಲಿರುವಂತೆ ತಿಳಿಯಬಂದಿರುತ್ತೆಯಾಗಿ ಈ ಲಾಗಾಯಿತು ಬಂದು ತಿಂಗಳು ವಾಯಿದೆಯಲ್ಲಿ ಈ ತಲಬಿಗೆ ಇರತಕ್ಕ ಹಕ್ಕನ್ನು ತಿಳಿಯಪಡಿಸದೇ ಇರುವ ಭಾಗದಲ್ಲಿ ಸದರೀ ಮೊಬಲಗನ್ನು ಸಂಕ್ಟಾರಕ್ಕೆ ಅರ್ಜ ಜಮೆಗೆ ತಂದುಕೊಳ್ಳುವದರಲ್ಲಿ ಬರುತ್ತೆ. ತಿಳಿಯುವದು.

ಹೆಸರು.	ಮಾಹೆ.	ಮೊಬಲಗು.
ಕರಿಯಾ	1902ನೇ ಆಗಸ್ಟ್	2—15—0
ನಂಜಾ	1900ನೇ ಅಕ್ಟೋಬರ್	0—12—11
	ಅಂತು ...	3—11—11

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ, ತಾರೀಖು 12ನೇ ಫೆಬ್ರವರಿ 1903.

ಕೋಲಾರ ತಾಲ್ಲೂಕಿಗೆ ಸೇರಿದ ಜೋಡಿ ಜಂಬಾಪುರ ಮತ್ತು ಜೋಡಿ ಹಾವಳಿಗವುಡನ ಹೊಸೂರು ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಆವಿುಲರವರ ಕಚೇರಿಯಲ್ಲಿ 1903ನೇ ಇಸವಿ ಏಪ್ರಿಲ್ 2ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲ್ ಬಗ್ಯೆ 1902ನೇ ಮಕ್ಕಂ 7ನೇ ನಂಬರ್ ಮೈಸೂರ ಗೆಜೆಟ್ಟಿನ 2ನೇ ಭಾಗದ 67ನೇ ನಂಬರ್ ಪೇಜು ನೋಡತಕ್ಕದ್ದು.

ಎಸ್. ಅಮೀರ್ ಹಸ್ಸೇ,
ಆಕ್ಟಿಂಗ್ ಡೆಪ್ಯೂಟಿ ಕಮಿಷನರ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ವಿ|| ಅರ್ಜೀ ನಂಬರ್ 353.

ಮೃತಪಟ್ಟ ಹೊನ್ನಮ್ಮ ಎಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಿರಂಗೂರು ಹೋಬಳಿ ಚಿಕ್ಕಡೆ ಗ್ರಾಮದಲ್ಲಿರುವ ಪುಟ್ಟೆಗೌಡನ ಮಗಳು ಹೊನ್ನಮ್ಮ, ಮೃತಪಟ್ಟ ಸದರೀ ಹೊನ್ನಮ್ಮನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೇಲ್ಕಂಡ ಚಿಕ್ಕಡೆ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಗರಡಿ ಹೊನ್ನಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊನ್ನಮ್ಮನ ಅರ್ಜಿಯನ್ನು ಸ್ರ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 10 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೊನ್ನಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1903ನೇ ಇಸವಿ ಫೆಬ್ರವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಟ್ಟಾಗಿದೆ.

ಎಸ್. ವರದರಾಜಯ್ಯಂಗಾರ್, ಸಬ್‌ಜಡ್ಜ.

ಚಿಕ್ಕಬಳ್ಳಾಪುರ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶಿಡ್ಲಘಟ್ಟ ತಾಲ್ಲೂಕು ನಾಗಮಂಗ್ಲದ ವಾಸಸ್ಥ ಸಾವಾ ಅಪ್ಪಯ್ಯನ ವಿಷಯದಲ್ಲಿ—

ಸ್ರ 1902–1903ನೇ ಇಸವಿ ದಿವಾಳೀ ಮಿಸಲೇನಿಯಸ್ ಕೇಸ್ ನಂಬರ್ 155.

ಹುಕ್ಕುಂ.

ಮೇಲ್ಕಂಡ ಸದರೀ ಸಾವಾ ಅಪ್ಪಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವ್ಹೆ :—ಮುನಸೀಫ್ ಸಿ. ಸುಬ್ಬರಾವ್ ಎಸ್ಕ್ವಯರ್ ಯವರ ರೂಬರೂ ಅರ್ಜಿದಾರನಾದ ಸಾವಾ ಅಪ್ಪಯ್ಯನ ಪರವಾಗಿ ಖುದ್ದು ಅವರ ಸಮಕ್ಷವದಲ್ಲಿ ಮತ್ತು ಸದರೀಯವನ ಲೇಣೇದಾರರಾದ ಎದರರ್ಜಿದಾರ್ರು ಗೈರ್‌ಹಾಜರು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಖುದ್ದು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸಾವಾ ಅಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ತತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1903ನೇ ಇಸವಿ ಫೆಬ್ರವರಿ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ವುಂಟಾದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಲಿರುವ ಅಳ್ಳಥಕಲ್ಲು ಬಸಣ್ಣನವರು.	98—0—2		ಡಿಕ್ರಿ ಬಾಬತು	
2	ಡಿಟೋ ಊರು, ನೂಲು ಅಂಗಡಿ ಹುಚ್ಚಣ್ಣನವರು.	30—0—0			
3	ಡಿಟೋ ಅಪ್ಪೂರಪ್ಪನವರು	80—0—0			
4	ಶಿಡ್ಲಘಟ್ಟ ತಾಲ್ಲೂಕು ನಾಗಮಂಗಲದ ಕಾನುಭೋಗ ನಾರಣಪ್ಪನವರು.	40—0—0			
		248—0—2			

ಸಿ. ಸುಬ್ಬರಾವ್, ಮುನ್ಸೀಫ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್.

ನೋಟಿಸ್.

ತಾರೀಖು 14ನೇ ಫೆಬ್ರವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಪಟ್ಟಣ ಮ್ಯುನಿಸಿಪಲ್ ಸರಹದ್ದಿನೊಳಗೆ ವಾರಸ್ದಾರರಿಲ್ಲದೆ ತಿರುಗಾಡುತ್ತಲಿರುವ ಪೋಲಿ ನಾಯಿಗಳು ಬರುವ ಮಾಹೆ 1ನೇ ತಾರೀಖು ಲಾಗಾಯಿತು 1903ನೇ ಇಸವಿ ಜೂನ್ 30ನೇ ತಾರೀಖು ವರಿಗೂ ಕೊಲ್ಲಲ್ಪಡುವವು. ನಾಯಿಗಳನ್ನು ಇಟ್ಟುಕೊಂಡಿರುವವರೆಲ್ಲರು ಅವುಗಳನ್ನು ಕಟ್ಟಿಹಾಕಿಕೊಳ್ಳಬೇಕು. ಅಥವಾ ಬೀದಿಗಳಲ್ಲಿ ತಿರುಗಾಡುವದಕ್ಕೆ ಬಿಟ್ಟಲ್ಲಿ ಅವುಗಳಿಗೆ ಕೊರಳುಪಟ್ಟಿ ಹಾಕಿರಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಪಿ. ಪಲಪ್ಪ,
ಫಾರ್ ಪ್ರೆಸಿಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅದರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ, ಕ್ಯೂರೇಟರ್.